**OS No. 34/2020**
**ಪಿ.ಡಬ್ಲ್ಯೂ: 1**

**ದಿನಾಂಕ 29-03-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರು ಶ್ರೀ ಬಿ ಬಿ ಕೆ ವಕೀಲರಿಂದ ಃ</u>**

ನನ್ನ ಮುತ್ತಾತನ ಹೆಸರು ಯಂಕಪ್ಪ. ಯಂಕಪ್ಪ ಮತ್ತು ಭೀಮಣ್ಣ ಇಬ್ಬರೂ ಸಹೋದರರು ಎಂದರೆ ಸರಿ. ದೊಡ್ಡ ಯಮನಪ್ಪ ನನ್ನ ತಾತ ಎಂದರೆ ಸರಿ. ಸಣ್ಣ ಯಮನಪ್ಪ ಪ್ರತಿವಾದಿ ಇವರ ತಾತ ಎಂದರೆ ಸರಿ. ದೊಡ್ಡ ಯಮನಪ್ಪನ ಹೆಂಡತಿ ಹೊನ್ನಮ್ಮ ಮತ್ತು ಸಣ್ಣ ಯಮನಪ್ಪನ ಹೆಂಡತಿ ಹಣಮವ್ವ ಇವರು ಸಹೋದರಿಯರು ಎಂದರೆ ಸರಿ. ನಾನು 3 ಜನ ಅಣ್ಣ-ತಮ್ಮಂದಿರು ಎಂದರೆ ಸರಿ. ನಾನು, ಶಿವಪ್ಪ ಮತ್ತು ಮಲ್ಲೇಶ 3 ಜನ ಅಣ್ಣ-ತಮ್ಮಂದಿರು ಎಂದರೆ ಸರಿ. ಶಿವಪ್ಪ ಇವರು ಮರಣ ಹೊಂದಿ 2-3 ವರ್ಷಗಳಾಗಿವೆ. ನಮಗೆ ಹಿರಿಯರಿಂದ ಬಂದ ಆಸ್ತಿ ಯಾವುದು ಮತ್ತು ಎಷ್ಟು ಎಂದರೆ ಸಾಕ್ಷಿಯು ಮುಂಡರಗಿ ಗ್ರಾಮಕ್ಕೆ ಸೇರಿದ ಜಮೀನು ಸರ್ವೆ ನಂಬರ-175/ಈ ಅದರ ಕ್ಷೇತ್ರ 7 ಎಕರೆ 26 ಗುಂಟೆ ಇದೆ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂಬರ 175/ಈ ಕ್ಷೇತ್ರ 7 ಎಕರೆ 26 ಗುಂಟೆಯಲ್ಲಿ ದೊಡ್ಡ ಯಮನಪ್ಪ ಮತ್ತು ಸಣ್ಣ ಯಮನಪ್ಪನಿಗೆ ಅರ್ಧ ಪಾಲು ಇರುತ್ತದೆ ಎಂದರೆ ಸರಿ. ನಮಗೆ 3 ಎಕರೆ 33 ಗುಂಟೆ ಮತ್ತು ಸಣ್ಣ ಯಮನಪ್ಪನಿಗೆ 3 ಎಕರೆ 34 ಗುಂಟೆ ಬಂದಿರುತ್ತದೆ. ಸದರಿ ಆಸ್ತಿಯನ್ನು ಬಿಟ್ಟು ನಮಗೆ ಬೇರೆ ಯಾವುದೇ ಜಮೀನು ಇರುವುದಿಲ್ಲ. ಸದರಿ ದಸ್ತರಾಬಾದದಲ್ಲಿರುವ ಜಮೀನು ಸರ್ವೆ ನಂಬರ 45 ಇರುತ್ತದೆ ಅದರ ಕ್ಷೇತ್ರ ನಮಗೆ 2 ಎಕರೆ 8 ಗುಂಟೆ ನಮ್ಮ ಪಾಲಿಗೆ ಬಂದಿರುತ್ತದೆ. ಸದರಿ ಸರ್ವೆ ನಂಬರ 45 ರಲ್ಲಿ ಪ್ರತಿವಾದಿಯರ ಕುಟುಂಬಕ್ಕೆ ಪಾಲು ಇರುವುದಿಲ್ಲ. ಅವರಿಗೆ ಬೇರೆ ಕಡೆ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ಶರಣಪ್ಪ ತಂದೆ ಬಸಣ್ಣ ಜಾಕನಳ್ಳಿ ಯಾದಗಿರಿಯಲ್ಲಿ ಸಮಾಜ ಸೇವಕರು ಇರುತ್ತಾರೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಮೌಲಾಲಿ ತಂದೆ ಸಾಬಣ್ಣ ಅನಕೂರ ಇವರ ಪರಿಚಯ ನನಗೆ ಇಲ್ಲ. ಮಲ್ಲೇಶಪ್ಪ ತಂದೆ ಸಾಬಣ್ಣ ಮ್ಯಾಗರ ಇವರ ಪರಿಚಯ ಇಲ್ಲ. ಹಣಮಂತ ತಂದೆ ಭೀಮಣ್ಣ ಅವರ ಪರಿಚಯಎಲ್ಲ. ಶಿವಪ್ಪ ತಂದೆ ಭೀಮಶಪ್ಪ ಇವರ ಪರಿಚಯವಿದೆ. ಅವನು ನನ್ನ

ತಮ್ಮನಾಗಬೇಕು. ಮಲ್ಲೇಶಿ ತಂದೆ ಭೀಮಶಪ್ಪ ನನ್ನ ತಮ್ಮನಾಗಬೇಕು ಎಂದರೆ ಸರಿ. ಸದರಿ ನಿಪಿ-9 ರಲ್ಲಿ ತೋರಿಸಿದ ಸಹಿಯನ್ನು ನನ್ನದಲ್ಲ ಎಂದು ಸಾಕ್ಷಿಯು ಅಲ್ಲಗಳೆಯುತ್ತಾರೆ. ಸರ್ವೆ ನಂಬರ 175/ಈ ಜಮೀನಿನ ಸಲುವಾಗಿ ಭೀಮಣ್ಣ ಉಪ್ಪಾರ ಇವರ ಜೊತೆ ಮಾತನಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಭೀಮಣ್ಣ ಉಪ್ಪಾರ ಇವರಿಗೆ ದಾವಾ ಆಸ್ತಿಯನ್ನು ವರ್ಷದ ಆಧಾರದ ಮೇಲೆ ಗೇಣಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಭೀಮಣ್ಣ ಉಪ್ಪಾರ ಇವರ ಕಡೆಯಿಂದ ಹಣವನ್ನು ಪಡೆದುಕೊಂಡು ಜಮೀನು ಮಾರಾಟ ಮಾಡುತ್ತೇವೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಭೀಮಣ್ಣ ಉಪ್ಪಾರ ಇವರು ನನಗೆ ಮಾರಾಟ ಮಾಡುವುದಕ್ಕಿಂತ ಮುಂಚೆ ನಿನ್ನ ಅಣ್ಣ-ತಮ್ಮಂದಿರಿಗೆ ಮಾರಾಟ ಮಾಡು ಅವರು ನಿರಾಕರಿಸಿದರೆ ನಾನು ತೆಗೆದುಕೊಳ್ಳುತ್ತೇನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಲ್ಲೇಶಪ್ಪ ತಂದೆ ಸಾಯಿಬಣ್ಣ, ಹಣಮಂತ ತಂದೆ ಭೀಮಣ್ಣ ಇವರ ಮೂಲಕ ನನ್ನ ಜಮೀನನ್ನು ಪ್ರತಿವಾದಿಗೆ ಖರಿದಿ ಮಾಡಲು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಾನು ಜಮೀನನ್ನು ಮಾರಾಟ ಮಾಡಲು ಒಪ್ಪಿ ದಾವಾ ಆಸ್ತಿಯನ್ನು ಪ್ರತಿವಾದಿಗೆ ನಾನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾದಗಿರಿಯಲ್ಲಿ ಮದ್ಯಸ್ಥಿಗಾರಿಕೆ ಮಾಡುತ್ತೇನೆ ಎಂದರೆ ಸರಿಯಲ್ಲ. ಸದರಿ ಖರಿದಿ ಪತ್ರವನ್ನು ಜಿ ಬಿ ಆರ್ ವಕೀಲರ ಮುಖಾಂತರ ತಯಾರಿ ಮಾಡಿಸಿ ಖರಿದಿ ಪತ್ರವನ್ನು ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-9 ಕ್ಕೆ ನನ್ನ ಸಹೋದರರು ಕೂಡ ಸಾಕ್ಷಿ ಸಹಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹೊನಗೇರಾ ಗ್ರಾಮದ ಹಳ್ಳೆಪ್ಪ ಇವರಿಗೆ ಜಮೀನು ಸರ್ವೆ ನಂಬರ 175/ಈ 2 ಎಕರೆ 20 ಗುಂಟೆ ಜಮೀನು ಮಾರಾಟ ಮಾಡಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಅಜ್ಜಿ ಹೊನ್ನಮ್ಮ ಇವರು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪ್ರತಿವಾದಿಗೆ ಬರುವಂತಹ ಹಿಸ್ಸೆ 1 ಎಕರೆ 10 ಗುಂಟೆಯನ್ನು ಕೂಡ ಮಾರಾಟ ಮಾಡುತ್ತಿಯಾ? ಎಂದರೆ ಸಾಕ್ಷಿಯು ಪ್ರತಿವಾದಿಗೆ 2 ಎಕರೆ ಜಮೀನನ್ನು ಬಿಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಪ್ರತಿವಾದಿಯು ನನಗೆ ಬರತಕ್ಕಂತಹ 1 ಎಕರೆ 10 ಗುಂಟೆ ಜಮೀನನ್ನು ಹೇಗೆ ಮಾರಾಟ ಮಾಡಿರುತ್ತೀಯಾ ಎಂದು ಕೇಳಿದಾಗ ನಾನು ಈ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಇಬ್ಬರು ಜನ ಹೆಂಡತಿಯರು ಇದ್ದಾರೆ. ಸದರಿ ನಾನು ಎರಡನೆ ಮದುವೆ ಮಾಡಿಕೊಂಡಾಗ ಆರ್ಥಿಕವಾಗಿ ತೊಂದರೆಯಲ್ಲಿರುವಾಗ ದಾವಾ ಆಸ್ತಿಯ ಪೈಕಿ 3 ಎಕರೆ 33 ಗುಂಟೆಯನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಮುಂಡರಗಿ ಸೀಮೆಯಲ್ಲಿ ಯಾವುದೇ

ಜಮೀನು ಇಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿ ಕಡೆಯಿಂದ ಹಣ ಪಡೆದುಕೊಂಡು ಖರಿದಿ ಪತ್ರ ಮಾಡಿಕೊಂಡಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖರಿದಿ ಮಾಡಿದ ನಂತರ ಪ್ರತಿವಾದಿಯ ಹೆಸರಿನಲ್ಲಿ ದಾವಾ ಆಸ್ತಿ ವರ್ಗಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸನಃ 2001 ರಿಂದ ಇಲ್ಲಿಯವರೆಗೆ ಪ್ರತಿವಾದಿಯೇ ಮಾಲೀಕ ಮತ್ತು ಸ್ವಾದೀನದಾರರು ಇರುತ್ತಾರೆ ಎಂದರೆ ಸರಿಯಲ್ಲ. ಸದರಿ ನಿಪಿ-8 ಯಾವ ವರ್ಷದ್ದು ಎಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ನಿಪಿ-8 ಸನಃ 1993 ರಲ್ಲಿರುವ ಕೃಷಿ ಪಾಸಬುಕ್ ಇದೆ ಎಂದರೆ ಸರಿ. ಸದರಿ ನಾನು ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ ನಂತರ ದಿನಾಂಕಃ 30-03-2001 ರಂದು ಪ್ರತಿವಾದಿಯ ಹೆಸರು ಪಹಣಿಯಲ್ಲಿ ಸೇರ್ಪಡೆಯಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಯಾದಗಿರಿಯಲ್ಲಿ ವಾಸವಾಗಿರುತ್ತೇನೆ. ನನ್ನ ಮನೆ ಮತ್ತು ಮೌಲಾಲಿ ಅನಪೂರ ಇವರ ಮನೆ ಸಮೀಪ ಇದೆ ಎಂದರೆ ಸರಿಯಲ್ಲ. ಸದರಿ ಮೌಲಾಲಿ ಕಡೆಯಿಂದ ಏನೇ ವಿಷಯ ಇದ್ದರೂ ಕೂಡ ಬಗೆಹಡಿಸಿಕೊಳ್ಳುತ್ತೇವೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಜಮೀನಿನ ಮೌಲ್ಯವೂ ಹೆಚ್ಚಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಾವಾ ಜಮೀನಿನ ಮೌಲ್ಯವು ಹೆಚ್ಚಾಗಿರುವುದರಿಂದ ಪ್ರತಿವಾದಿಯಿಂದ ಹೆಚ್ಚು ಹಣ ಪಡೆದುಕೊಳ್ಳಬಹುದು ಎಂದು ಆದ್ದರಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನನ್ನ ಮತ್ತು ಪ್ರತಿವಾದಿಯ ಮನೆ ಸಮೀಪ ಇದೆ ಎಂದರೆ ಸಾಕ್ಷಿಯು ಸ್ವಲ್ಪ ದೂರ ಇದೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆ : ಇಲ್ಲ**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ**